ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯ
ಸಹಾಯಕ ಕಾರ್ಯಪಾಲಕ ಅಭಿಯಂತರರು ಕಛೇರಿ, ಯಲಹಂಕ ಉಪ ವಿಭಾಗ
ವಾರ್ಡ್ ನಂ. 02 (ಚೌಡೇಶ್ವರಿ) ವಾರ್ಡ್ ಕಮಿಟಿ ಸಭೆ.

ದಿನಾಂಕ: 07-11-2020 ರಂದು ಬೆಳ್ಳಿಗೆ 10.00 ಗಂಟೆಗೆ ವಾರ್ಡ್ ನಂ-02 ಚೌಡೇಶ್ವರಿ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ಯಲಹಂಕ ವಿಭಾಗ ಕಚೇರಿಯಲ್ಲಿರುವ ವಾರ್ಡ್ ಕಛೇರಿಯಲ್ಲಿ ನೆಡೆದ ವಾರ್ಡ್ ಕಮಟಿ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಷರಾ |
|---|---|---|---|
| 1 | ಶ್ರೀ.ಅಶೋಕ್ ಪಾಟೀಲ್ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ನೋಡೆಲ್ ಅಧಿಕಾರಿಗಳು. | ಶ್ರೀ. ಚಂದ್ರಪ್ಪ ವಿ. (ವಲಯ ಅರಣ್ಯಾದಿಕಾರಿಗಳು) | |
| | | ಶ್ರೀ.ಲಿಂಗರಾಜು (ಹಿ.ಆ.ಪ) | |
| | | ಶ್ರೀ.ಬಾಬು ರೆಡ್ಡಿ (ವಿದ್ಯುತ್) | |
| 2 | ಶ್ರೀ.ಚಂದ್ರಕಾಂತ್ ರಾಜ್ ಪಿ.ಎ ಸಹಾಯಕ ಅಭಿಯಂತರರು ಹಾಗೂ ಸಮಿತಿ ಕಾರ್ಯದರ್ಶಿ | ಶ್ರೀ.ಶ್ರೀನಿವಾಸ (ಬ್ಯನಿ.ಗಾ) | |
| | | ಶ್ರೀ.ಮಲ್ಯಾದ್ರಿ (ತೋಟಗಾರಿಕೆ) | |
| | | ಶ್ರೀ.ನಂದಶ್ರೀ. (ಕಿ.ಆ.ಪ) | |

ಶ್ರೀ. ಚಂದ್ರಕಾಂತ್‌ರಾಜ್ ಪಿ.ಎ ಸಹಾಯಕ ಅಭಿಯಂತರರು ವಾರ್ಡ್ ನಂ -02 ಹಾಗೂ ಕಾರ್ಯದರ್ಶಿಗಳು ವಾರ್ಡ್ ಸಮಿತಿ ರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು ಮತ್ತು ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಬಗ್ಗೆ ತಿಳಿಸಲಾಯಿತು.

ಶ್ರೀ ಅಶೋಕ್ ಪಾಟೀಲ್, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಮಿತಿಯ ನೋಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿದರು.

1. ಮೊದಲನೇದಾಗಿ ವಾರ್ಡ್ ನಂ -02ರ ವ್ಯಾಪ್ತಿಯಲ್ಲಿ ಈ ಹಿಂದಿನ ಸಭೆಯಲ್ಲಿ ದಿನಾಂಕ: 17-10-2020ರ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

2. ನಾಗೇನಹಳ್ಳಿ ಗ್ರಾಮದ ರೈಲ್ವೆ ಟ್ರಾಕ್ ಹತ್ತಿರ ರಸ್ತೆಯಲ್ಲಿ ಮಳೆ ನೀರು ನಿಲ್ಲುವುದರ ಬಗ್ಗೆ ಹಾಗೂ ಶೋಭ ಅಪಾರ್ಟ್‌ಮೆಂಟ್ ಹತ್ತಿರ ರಸ್ತೆ ಬೆಲ್‌ಮೌತ್ ಇದ್ದು ಇದನ್ನು ಸರಿಪಡಿಸುವಂತೆ ನಾಗೇನಹಳ್ಳಿ ಗ್ರಾಮದ ಶ್ರೀ.ಶಿವಕುಮಾರ್ ರವರು ಈ ಹಿಂದಿನ ಸಭೆಯಲ್ಲಿ ಕೋರಿದ್ದು, ಸದರಿ ಕೆಲಸವನ್ನು ಬಿ.ಬಿ.ಎಂ.ಪಿ ಪ್ರಾಜೇಕ್ಟ ವಿಭಾಗದಿಂದ ಕೈಗೊಂಡಿದ್ದು, ದೂರವಾಣಿ ಮುಖಾಂತರ ಸಂಪರ್ಕಿಸಿ ಕೂಡಲೇ ಕ್ರಮ ವಹಿಸುವಂತೆ ನೋಡೆಲ್ ಅಧಿಕಾರಿಗಳು ತಿಳಿಸಿದರು.
   (ಕ್ರಮ: ಬಿ.ಬಿ.ಎಂ.ಪಿ, ಕಾರ್ಯಪಾಲಕ ಅಭಿಯಂತರರು (ಯೋಜನೆ) ಯಲಹಂಕ ವಲಯ.

3. ನಾಗಾರ್ಜುನ ಅಪಾರ್ಟ್‌ಮೆಂಟ್ ಯಲಹಂಕ ಉಪನಗರ 5ನೇ ಹಂತ, ಸ್ಥಳೀಯವಾದ ಶ್ರೀ.ಶಂಕರ್ ನಾಯಕ್‌ರವರು ಮಾತನಾಡಿ ಈಗಾಗಲೇ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸುವಂತೆ ಕೋರಿದರು.
   (ಕ್ರಮ: ಸಹಾಯಕ ಅಭಿಯಂತರರು ಬಿ.ಬಿ.ಎಂ.ಪಿ ವಾರ್ಡ್-2)

ಮು.ತಿ.ನೋ

4. ಘನತ್ಯಾಜ್ಯ ವಿಲೇವಾರಿ ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ನೋಡಲ್ ಅಧಿಕಾರಿಗಳು ಸಂಬಂದಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.
   (ಕ್ರಮ : ಸ.ಕಾ.ಅ (ಎಸ್.ಡಬ್ಲ್ಯೂ.ಎಂ)ಯಲಹಂಕ ವಿಭಾಗ)

5. ವಾರ್ಡ್-2ರ ಪರಿಮಿತಿಯಲ್ಲಿ ಕೊರೊನಾ ಸೊಂಕು ಪತ್ತೆ ಹಚ್ಚಲು ಸಲುವಾಗಿ ಸದರಿ ಪ್ರದೇಶದಲ್ಲಿ ವಾಸಮಾಡುವ ಸಾರ್ವಜನಿಕರಿಗೆ ಪರಿಕ್ಷೇ ಮಾಡುವ ಮುನ್ನ ವಿಷಯ ತಿಳಿಸುವಂತೆ ಹಾಗೂ ಸಾರ್ವಜನಿಕರು ಇದಕ್ಕೆ ಸ್ಪಂಧಿಸಲು ಮನವಿ ಸಲ್ಲಿಸಲಾಯಿತು.
   (ಕ್ರಮ : ಆರೋಗ್ಯಾದಿಕಾರಿಗಳು ಬಿ.ಬಿ.ಎಂ.ಪಿ ಯಲಹಂಕ ವಲಯ)

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

7/11/2020
ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ. 02( ಚೌಡೇಶ್ವರಿ)

07/11/2020
ನೋಡಲ್ ಅಧಿಕಾರಿಗಳು
ವಾರ್ಡ್ ಕಮಿಟಿ, ವಾರ್ಡ್ ನಂ. 02(ಚೌಡೇಶ್ವರಿ)

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಮಾಹಿತಿಗಾಗಿ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಮಾಹಿತಿಗಾಗಿ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರ ಮಾಹಿತಿಗಾಗಿ.
4. ಕಾರ್ಯಪಾಲಕ ಅಭಿಯಂತರರು, (ಯೋಜನೆ) ಯಲಹಂಕ ವಲಯ ರವರ ಮಾಹಿತಿಗಾಗಿ.
5. ಕಛೇರಿ ಕಡತಕ್ಕೆ.